ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ : DEPARTMENT / SUBJECT: ಮುಖ್ಯಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ

ದಿನಾಂಕ : DATE: 30/3/21

### ಸಿಎಂ ಸೂಚನೆ | ಸಚಿವರು, ಅಧಿಕಾರಿಗಳಿಗೆ ತಾಕೀತು | ಮುಖ್ಯ ಕಾರ್ಯದರ್ಶಿ ಮೂಲಕವೇ ಆದೇಶ

# ಕರೊನಾ ನಿರ್ವಹಣೆಗೆ ಏಕರೂಪ ಕಾರ್ಯವಿಧಾನ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು 30-3-21

ಕರೊನಾ ಸೋಂಕು ನಿಯಂತ್ರಣ ಹಾಗೂ ನಿರ್ವಹಣೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಮಾದರಿಯಲ್ಲೇ ಏಕರೂಪ ಕಾರ್ಯವಿಧಾನ ಅನುಸರಿಸಲು ಸರ್ಕಾರ ನಿರ್ಧರಿಸಿದೆ. ಕರೊನಾ ಕಟ್ಟಿ ಹಾಕಲು ಹೊಸ ನಿರ್ಬಂಧಗಳ ಜಾರಿ ಕುರಿತು ಸಚಿವರು ಹಾಗೂ ಅಧಿಕಾರಿಗಳು ಹೇಳಿಕೆ ನೀಡಬಾರದು ಎಂದು ಸಿಎಂ ಯಡಿಯೂರಪ್ಪ ಖಡಕ್ ಸೂಚನೆ ನೀಡಿದ್ದಾರೆ.

**» ಯಾವುದೇ ಹೇಳಿಕೆ ನೀಡದಂತೆ ನಿರ್ದೇಶನ**

ಕಾರ್ಯರೂಪದಲ್ಲಿ ಏಕರೂಪತೆ ಹಾಗೂ ದೃಢತೆ ಸಾಧಿಸುವ ಉದ್ದೇಶದಿಂದ ಕಂದಾಯ ಇಲಾಖೆಯ ವಿಪತ್ತು ನಿರ್ವಹಣಾ ಕೋಶದ ಅಧ್ಯಕ್ಷರಾದ ಸರ್ಕಾರದ ಮುಖ್ಯ ಕಾರ್ಯದರ್ಶಿ ಸಹಿಯಲ್ಲಿ ಮಾತ್ರ ಆದೇಶ ಹೊರಡಿಸಲಾಗುತ್ತದೆ. ಜನ-ವಾಹನ ಸಂಚಾರ, ನಿಯಂತ್ರಿತ ವಲಯ, ಅನುಮತಿ ನೀಡಿದ ಅಥವಾ ನೀಡಲಾಗದ ಚಟುವಟಿಕೆಗಳು ಸೇರಿ ಹೊಸ ನಿರ್ಬಂಧಗಳನ್ನು ಸಿಎಂ ಅನುಮೋದನೆ ಪಡೆದ ನಂತರವೇ ಮುಖ್ಯ ಕಾರ್ಯದರ್ಶಿ ಆದೇಶ ಪ್ರಕಟಿಸಲಿದ್ದಾರೆ.

**ಸಚಿವರಿಗೆ ತಾಕೀತು:** ಕರೊನಾ ನಿಯಂತ್ರಣಕ್ಕೆ ನಿರ್ಬಂಧ ವಿಧಿಸುವ ಕುರಿತು ಆಯಾ ಇಲಾಖೆಗಳು ಪ್ರತ್ಯೇಕವಾಗಿ ಆದೇಶ ಹೊರಡಿಸುವಂತಿಲ್ಲ.



ಕರೊನಾ ಉಲ್ಬಣ ತಡೆ ಕುರಿತು ಮುಖ್ಯಮಂತ್ರಿ ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನೇತೃತ್ವದಲ್ಲಿ ಸಚಿವರು ಹಾಗೂ ಸರ್ಕಾರದ ಉನ್ನತಾಧಿಕಾರಿಗಳ ಸಭೆ ನಡೆಯಿತು.

ಸಚಿವರು ಅಥವಾ ಅಧಿಕಾರಿಗಳು ಯಾವುದೇ ಹೇಳಿಕೆ ನೀಡುವಂತಿಲ್ಲ ಎಂದು ತಾಕೀತು ಮಾಡಿದ್ದಾರೆ. ಹೊಸದಾಗಿ ಜಾರಿಗೊಳಿಸಿದ ನಿರ್ಬಂಧಗಳ ಕುರಿತು ವಿವರಣೆ ನೀಡುವುದಕ್ಕೆ ಅಭ್ಯಂತರವಿಲ್ಲ ಎಂದು ಸಚಿವರು ಹಾಗೂ ವಿವಿಧ ಇಲಾಖೆಗಳ ಉನ್ನತಾಧಿಕಾರಿಗಳಿಗೆ ಸಿಎಂ ಬರೆದ ಪತ್ರದಲ್ಲಿ ತಿಳಿಸಿದ್ದಾರೆ. ಕೇಂದ್ರದ ಗೃಹ ಸಚಿವಾಲಯ ಮಾದರಿಯಲ್ಲೇ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ), ನಿರ್ಬಂಧ ಕುರಿತು ಮುಖ್ಯ ಕಾರ್ಯದರ್ಶಿ ಸಹಿಯೊಂದಿಗೆ ಆದೇಶ ಹೊರಡಿಸಲಾಗುತ್ತಿತ್ತು. ಕೆಲವು ಇಲಾಖೆಗಳು ತಮ್ಮದೇ ಆದ ಎಸ್‌ಒಪಿ, ನಿರ್ಬಂಧ ಆದೇಶ ಜಾರಿ ಮಾಡುತ್ತಿರುವುದನ್ನು ಮುಖ್ಯಮಂತ್ರಿ ಗಮನಿಸಿ ಈ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

**ಗೊಂದಲ ತಪ್ಪಿಸಲು ಕ್ರಮ**

ಕರೊನಾ ನಿರ್ವಹಣೆ ವಿಚಾರದಲ್ಲಿ ಅನಗತ್ಯ ಗೊಂದಲ, ಸಚಿವ ಸಂಪುಟದ ಸಹೋದ್ಯೋಗಿಗಳ ಮಧ್ಯೆ ಸಮನ್ವಯವಿಲ್ಲವೆಂಬ ತಪ್ಪು ಸಂದೇಶ ರವಾನೆಯಾಗುವುದನ್ನು ತಪ್ಪಿಸಲು ಬಿಎಸ್‌ವೈ ಬಿಗಿ ನಿಲುವು ತಳೆದಿದ್ದಾರೆ. ಈ ಹಿಂದೆಯೂ ಲಾಕ್‌ಡೌನ್, ರಾತ್ರಿ ಕರ್ಫ್ಯೂ ಇತ್ಯಾದಿ ಕಠಿಣ ಕ್ರಮಗಳ ಜಾರಿ, ನಿರ್ವಹಣೆಯ ವಿಷಯದಲ್ಲಿ ಸಚಿವರ ನಡುವೆ ಸಂವಹನ ಕೊರತೆ ಉಂಟಾಗಿತ್ತು. ಮತ್ತದೇ ಸಮಸ್ಯೆ ಸೃಷ್ಟಿಯಾಗುವ ಸಾಧ್ಯತೆ ಅರಿತ ಬಿಎಸ್‌ವೈ ಎಚ್ಚರಿಕೆಯ ನಡೆ ಅನುಸರಿಸಿದ್ದಾರೆ. ಪರೀಕ್ಷೆಯಿಲ್ಲದೆ 1-9 ತರಗತಿ ವಿದ್ಯಾರ್ಥಿಗಳನ್ನು ಪಾಸ್ ಮಾಡಿಸುವ ಕುರಿತು ಸಚಿವರಾದ ಸುಧಾಕರ್ ಹಾಗೂ ಸುರೇಶ್ ಕುಮಾರ್ ಭಾನುವಾರ ವಿಭಿನ್ನ ಹೇಳಿಕೆ ನೀಡಿದ್ದರು. ಇದು ಸಾರ್ವಜನಿಕವಾಗಿ ಚರ್ಚೆಯಾಗಿತ್ತು.